# ಗದ್ದಲವಿಲ್ಲದ ಗೆದ್ದಲ ಬದುಕು

ನೆಲಕ್ಕೆ ಬಿದ್ದ ಎಲೆಯನ್ನು ಗೆದ್ದಲು ಹುಳುಗಳು ಹೇಗೆ ಯಥಾವತ್ತಾಗಿ ತಿಂದು ಹ್ಯೂಮಸ್ ಆಗಿಸಿವೆ ಎಂಬುದು ಚಿತ್ರವನ್ನು ನೋಡಿದಾಕ್ಷಣ ಅರಿವಾಗುತ್ತದೆ. ಆದರೆ ವಿಷಯ ಅದಲ್ಲ. ಮರದಿಂದ ಉದುರಿದ ಒಣ ಎಲೆ ನೆಲದ ಮೇಲೆ ಬಿದ್ದು ಕೆಲವೇ ದಿನಗಳಲ್ಲಿ ಅಕ್ಷರಶಃ ಮಣ್ಣಲ್ಲಿ ಮಣ್ಣಾಗಿದ್ದರೂ ಅದರೊಟ್ಟಿಗೇ ಇರುವ ಗುಟ್ಕಾದ ಚೀಟಿಯಾಗಲೀ ಅಥವಾ ಕೃತಕ ನೂಲಿನಿಂದಾದ ಬಟ್ಟೆಯಾಗಲೀ ಕಿಂಚಿತ್ತೂ ಬದಲಾಗದೇ ಹಾಗೇ ಉಳಿದಿವೆ. ಅಂದರೆ ಈ ಜೀವಜಗತ್ತಿನಲ್ಲಿ ಮನುಷ್ಯನ ಚಟುವಟಿಕೆಗಳು ಎಷ್ಟೊಂದು ಅಗಾಧವಾಗಿ ಮಾಲಿನ್ಯವನ್ನುಂಟು ಮಾಡುತ್ತಿವೆ ಎಂಬುದನ್ನು ಈ ಗೆದ್ದಲು ಹುಳಗಳು ಗದ್ದಲ ಮಾಡದೇ ತೋರಿಸಿಕೊಟ್ಟಿವೆ.

ಒಂದೆಡೆ ಲಂಗುಲಗಾಮಿಲ್ಲದೇ ವೇಗವಾಗಿ ಓಡುತ್ತಿರುವ 'ಆಧುನಿಕ ಜೀವನಶೈಲಿ' ಎಂಬ ಹುಚ್ಚುಕುದುರೆ ಮತ್ತೊಂದೆಡೆ ಮನುಷ್ಯನ ಖಯಾಲಿಗಳು ಮತ್ತು ಅದರಿಂದ ಉಂಟಾಗುತ್ತಿರುವ ಮಾಲಿನ್ಯಗಳು ಇರುವ ಈ ಭೂಮಿಯನ್ನು ಎಷ್ಟೆಲ್ಲಾ ವಿಧವಾಗಿ ಹಾಳುಮಾಡಲು ಸಾಧ್ಯವೋ ಆ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳುತ್ತಿವೆ. ಜೇನುನೊಣಗಳಂತೆ ಗುಂಪಾಗಿ ಬದುಕುವ ಗೆದ್ದಲು ಹುಳಗಳು ಪರಿಸರ ಸಮತೋಲನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹಳೆಯ ಮರಗಳ ನಿರ್ಜೀವ ಭಾಗಗಳನ್ನು ಜೀರ್ಣಿಸಿಕೊಳ್ಳುವ ಇವುಗಳಿಗೆ ಮನುಷ್ಯ ನಿರ್ಮಿತ ಪೀಠೋಪಕರಣಗಳೆಂದರೆ ಅಚ್ಚುಮೆಚ್ಚು. ಈ ಪೀಠೋಪಕರಣಗಳ ಒಳಗೆ ಸುರಂಗ ನಿರ್ಮಿಸಿಕೊಂಡು ತಮ್ಮ ಸಾಮ್ರಾಜ್ಯ ಸ್ಥಾಪಿಸುವ ಈ ಪುಟ್ಟ ಜೀವಿಗಳ ಕುಟುಂಬದಲ್ಲಿ ಹತ್ತಾರು ಸಾವಿರದಿಂದ ಲಕ್ಷಗಳವರೆಗೂ ಇರುತ್ತವೆ.

ಜಾಗತಿಕ ತಾಪಮಾನ ಏರಿಕೆ, ಆಧುನಿಕ ಕೃಷಿ ಪದ್ಧತಿ, ಅರಣ್ಯ ನಾಶ ಮುಂತಾದವುಗಳಿಂದ ಇವುಗಳು ಅವನತಿಯತ್ತ ಸಾಗುತ್ತಿವೆ. ಭೂಮಿಯ ಮೇಲಿನ ಯಾವ ಜೀವಿಯೂ ತಮ್ಮ ಚಟುವಟಿಕೆಗಳಿಂದ ಮಾಲಿನ್ಯ ಉಂಟುಮಾಡುವುದಿಲ್ಲ. ಆದರೆ ಮನುಷ್ಯ ತನಗೆ ಅವಶ್ಯಕತೆ ಇರಲಿ ಬಿಡಲಿ, ಮಾಲಿನ್ಯವನ್ನಂತೂ ಯಥೇಚ್ಛವಾಗಿ ಮಾಡುವುದನ್ನು ಕಂಡಾಗ ಗೆದ್ದಲು ಹಿಡಿದಿರುವುದು ಯಾರ ಬುದ್ಧಿಗೆ? ಎಂದು ಗೊಂದಲವಾಗುತ್ತದೆ.

**–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ**





# ಅಕ್ಕಿ ಮುಡಿ ನಿರ್ಮಾಣ ಸಾಧನ ವಿಧಾನ

ದಶಕಗಳ ಹಿಂದೆ ಕರಾವಳಿಯಲ್ಲಿ, ಸಾಗುವಳಿ ಮಾಡುತ್ತಿದ್ದ ಪ್ರತಿ ಮನೆಗಳಲ್ಲೂ ದೀಪಾವಳಿಯ ನಂತರ ಸುಮಾರು ಎರಡಡಿ ವ್ಯಾಸದ ಸಿಹಿಗುಂಬಳಾಕಾರದ 'ಅಕ್ಕಿ ಮುಡಿ'ಗಳಲ್ಲಿ ಅಕ್ಕಿಯನ್ನು ಸಂಗ್ರಹಿಸಿಡುವುದು ವಾಡಿಕೆಯಾಗಿತ್ತು. ಮೊದಲು ಹದಗೊಳಿಸಿದ ಉದ್ದುದ್ದ ಭತ್ತದ ಹುಲ್ಲುಗಳ ಗುಚ್ಛವನ್ನು ಚಕ್ರಾಕಾರದಲ್ಲಿ ನೆಲದ ಮೇಲೆ ಎರಡಡಿ ವ್ಯಾಸದ ಹಗ್ಗದ ಉರುಳಿನ ಮೇಲೆ ಹರಡಿಸಲಾಗುತ್ತಿತ್ತು. ಬಳಿಕ ಒಳಾವರಣದಲ್ಲಿ ಭತ್ತದ ಹುಲ್ಲುಗಳ ಮೆತ್ತೆ ಹಾಸಿ, ಕಟ್ಟುವಾತ ಒಳಭಾಗದಲ್ಲಿ ಬಗ್ಗಿ ನಿಂತು ಹೊರಾವರಣದಲ್ಲಿರಿಸಿರುವ ಹಗ್ಗದ ಉರುಳನ್ನು ನಿಧಾನಕ್ಕೆ ಮೇಲ್ಭಾಗಕ್ಕೆ ಜಾರಿಸಿದಾಗ ನೆಲಕ್ಕೆ ಸಮಕೋನದಲ್ಲಿ ಮೇಲ್ಮುಖಾಕಾರ ಲಭಿಸುತ್ತಿತ್ತು.

ನಂತರ ಒಳಗಿನ ಖಾಲಿ ಸ್ಥಳದೊಳಗೆ 3 ಕಳಸೆ ( 1ಕಳಸೆ=14ಸೇರು ಮತ್ತು 1ಸೇರು=4ಪಾವು ಅಳತೆ) ಅಳತೆಯ ಅಕ್ಕಿ ಸುರಿದು, ಭತ್ತದ ಹುಲ್ಲಿಂದಲೇ ತಯಾರಿಸಿದ ಹಗ್ಗವನ್ನು ಉಪಯೋಗಿಸಿ ದುಂಡಾಕಾರದಲ್ಲಿ ಹೊದೆದು ಕಟ್ಟಲಾಗುತ್ತಿತ್ತು. ಇದನ್ನು ಕಟ್ಟುವ ಕೌಶಲ ಹೊಂದಿದ್ದ ದಕ್ಷಿಣ ಕನ್ನಡ ಜಿಲ್ಲೆಯ ರೈತರು ಅರೆ ಕತ್ತಿಯಾಕಾರದ 'ಕೊದಂಟಿ' ಎಂಬ ಮರದ ಭಾರವಾದ ಸಾಧನದಿಂದ ಬಡಿಯುತ್ತಾ ಹೊರ ಕವಚದ ಮೇಲೆ ಹಗ್ಗವನ್ನು ಅಡ್ಡಕ್ಕೂ ನೀಳಕ್ಕೂ ಸುತ್ತಿ ಬಿಗಿಗೊಳಿಸುತ್ತಿದ್ದರು. ನನ್ನ ಬಾಲ್ಯದಲ್ಲಿ ಅಜ್ಜ ಹೀಗೆ ಅಕ್ಕಿ ಮುಡಿ ನಿರ್ಮಿಸುತ್ತಿದ್ದಾಗ ಉಪಯೋಗಕ್ಕೆ ತಕ್ಕಂತೆ ಸಾಕಷ್ಟು ಹಗ್ಗವನ್ನು ಭತ್ತದ ಹುಲ್ಲಿನ ಹಗ್ಗದ ಉಂಡೆಯಿಂದ ಬಿಡಿಸಿ ಕೊಡುವ ಕೆಲಸವನ್ನು ತಾಳ್ಮೆಯಿಂದ ನಾನು ಮಾಡಬೇಕಿತ್ತು.

ಕಟ್ಟಿದ ಬಳಿಕ ಹೆಚ್ಚುವರಿ ಹಗ್ಗ ಮತ್ತು ಹುಲ್ಲಿನ ಎಳೆಗಳನ್ನು ಗರಗಸದಂತಹ ಕಿರು ಹಲ್ಲುಗಳಿರುವ ವಿಶೇಷ ಕತ್ತಿಯಿಂದ ಕತ್ತರಿಸುತ್ತಿದ್ದರು. ಚಿತ್ರದಲ್ಲಿ ಅಕ್ಕಿಮುಡಿ, ಕತ್ತಿ, ಕೊದಂಟಿ, ಭತ್ತದ ಹುಲ್ಲಿನ ಹಗ್ಗ ಇತ್ಯಾದಿಗಳನ್ನು ಕಳಸೆ, ಸೇರು, ಪಾವು, ಬಳ್ಳ ಮುಂತಾದ ಅಳತೆಯ ಸಾಧನಗಳ ಜೊತೆಗೆ ಗಮನಿಸಬಹುದಾಗಿದೆ. ಈ ಸಾಧನಗಳ ಸಂಗ್ರಹವನ್ನು ಮಂಗಳೂರಿನ ಪಿಲಿಕುಳದ ಗುತ್ತಿನಮನೆಯಲ್ಲಿ ಈಚೆಗೆ ಕಂಡು ಫೋಟೊ ಕ್ಲಿಕ್ಕಿಸಿಕೊಂಡೆ. ಇಂತಹ ಸಂಗ್ರಹಣೆ ಕ್ರಮೇಣ ಆಧುನಿಕ ರೈಸ್ ಮಿಲ್ಲುಗಳ ಗೋಣಿ/ಪ್ಲಾಸ್ಟಿಕ್ ಚೀಲಗಳಿಗೆ ವರ್ಗಾವಣೆಯಾದ ಕಾರಣ ಈಗ ಅಪರೂಪವೆನಿಸಿದೆ!

**–ರಮಣ್ ಶೆಟ್ಟಿ ರೆಂಜಾಳ, ಮುಂಬೈ**

# ಕಪ್ಪೆಯ ಜೀವನಚಕ್ರ 'ಗೊದ ಮೊಟ್ಟೆ'

ಕೆರೆಯ ಬಳಿ ನಡೆಯುತ್ತಾ ಹೋದಾಗ ಕಪ್ಪೆಯ ಜೀವನಚಕ್ರದ ಒಂದು ಭಾಗವಾದ ಗೊದ ಮೊಟ್ಟೆ ಮರಿ ಕಾಣಲು ಸಿಕ್ಕಿತು. ಕಪ್ಪೆ ಕೆರೆಯ ಬಳಿ ಮೊಟ್ಟೆಯನ್ನು ಇಡುತ್ತದೆ. ಮೊಟ್ಟೆಯಿಂದ ಹೊರಬಂದ ಮರಿ ಉದ್ದನೆಯ ಚಪ್ಪಟೆ ಬಾಲವನ್ನು ಹೊಂದಿರುತ್ತದೆ.

ಕಪ್ಪೆ ಮರಿಗಳು ಸಾಮಾನ್ಯವಾಗಿ ಪಾಚಿಯನ್ನು ತಿಂದು ಬದುಕುತ್ತವೆ ಎಂದು ಹೇಳಲಾಗುತ್ತದೆ. ಬಾಲದ ಮೂಲಕ ಇವುಗಳು ಈಜುತ್ತವೆ. ಈ ಹಂತದಲ್ಲಿ ಒಂದು ವಾರ ಇದ್ದ ನಂತರ ದೇಹ ಸಾಕಷ್ಟು ಬದಲಾವಣೆಯಾಗಿ ಬಾಲ ಕಾಣೆಯಾಗುತ್ತದೆ. ಬಳಿಕ ಇವುಗಳು ಕಾಲುಗಳಿಂದ ಚಲಿಸುವ ಅಭ್ಯಾಸ ಬೆಳೆಸಿಕೊಳ್ಳುತ್ತವೆ. ನಿಧಾನವಾಗಿ ವಯಸ್ಕ ಕಪ್ಪೆಗಳಾಗಿ ಬದಲಾವಣೆ ಆಗುತ್ತವೆ. ಭೂ ಹಾಗೂ ಜಲ ಎರಡೂ ಆವಾಸಗಳಲ್ಲಿ ವಾಸಿಸುವ ಕಪ್ಪೆಗಳ ಜೀವನ ಚಕ್ರ ಆಸಕ್ತಿದಾಯಕವಾಗಿದೆ.

**–ಅರುಣ್ ಕಿಲ್ಲೂರು**

